ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–01

ಸಂಖ್ಯೆ:ಸಿ3(7)ಪ್ರಾ.ಶಿ. ವರ್ಗ–01/2016–17 ದಿನಾಂಕ: 14/09/2016

: ಜ್ಞಾಪನ :

ವಿಷಯ:– 2016–17 ನೇ ಸಾಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಅಂತರ್‌ಘಟಕ ಪರಸ್ಪರ ಕೌನ್ಸಿಲಿಂಗ್ ವರ್ಗಾವಣೆಯ ಪರಿಷ್ಕೃತ ವೇಳಾಪಟ್ಟಿ:

---*****---

ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಸಹಶಿಕ್ಷಕರ ಅಂತರ್ ಘಟಕ ಪರಸ್ಪರ ವರ್ಗಾವಣೆಯ ಕೌನ್ಸಿಲಿಂಗ್ ದಿನಾಂಕವನ್ನು: 14/9/2016 ಮತ್ತು 15/9/2016 ರಂದು ನಿಗಧಿಪಡಿಸಲಾಗಿತ್ತು. ಕಾವೇರಿ ಜಲವಿವಾದದ ಪ್ರತಿಭಟನೆಯ ಹಿನ್ನೆಲೆಯಲ್ಲಿ ಮುಂದೂಡಲಾಗಿದ್ದ ವರ್ಗಾವಣಾ ಪ್ರಕ್ರಿಯೆಯನ್ನು ಬೆಂಗಳೂರು ಮತ್ತು ಮೈಸೂರು ವಿಭಾಗದ ವರ್ಗಾವಣಾ ಪ್ರಾಧಿಕಾರದಲ್ಲಿ ಕೆಳಕಂಡ ದಿನಾಂಕದಂದು ನಡೆಸಲಾಗುವುದು.

| ಕ್ರ ಸಂ | ದಿನಾಂಕ | ಅಂತಿಮ ಆದ್ಯತಾ ಪಟ್ಟಿಯಲ್ಲಿರುವ ಕ್ರಮ ಸಂಖ್ಯೆಯಂತೆ | ಸಮಯ |
|---|---|---|---|
| 1 | 16–9–2016 ಶುಕ್ರವಾರ | ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಪರಸ್ಪರ ವರ್ಗಾವಣೆ | ಬೆಳಿಗ್ಗೆ 09–30 |
| 2 | | ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ಪರಸ್ಪರ ವರ್ಗಾವಣೆ | ಮಧ್ಯಾಹ್ನ 12–00 |

***ಕೌನ್ಸಿಲಿಂಗ್ ನಡೆಯುವ ಸ್ಥಳ:***

1 ಬೆಂಗಳೂರು ವಿಭಾಗ–ಶಿಕ್ಷಕರ ಸದನ, 3ನೇ ಮಹಡಿ, ಕೆಂಪೇಗೌಡ ರಸ್ತೆ, ಬೆಂಗಳೂರು.

2. ಮೈಸೂರು ವಿಭಾಗ–ಸಹನಿರ್ದೇಶಕರ ಕಛೇರಿ, ಸಾ.ಶಿ.ಇ. ರಾಮಸ್ವಾಮಿ ವೃತ್ತ, ಮೈಸೂರು.

ಕೌನ್ಸಿಲಿಂಗ್‌ನಲ್ಲಿ ಹಾಜರಾಗುವ ಶಿಕ್ಷಕರುಗಳು ಈ ಕೆಳಕಂಡ ದಾಖಲೆಗಳೊಂದಿಗೆ ಹಾಜರಾಗುವುದು:

1) ಇಬ್ಬರು ಶಿಕ್ಷಕರು ಸೇವೆ ಸಲ್ಲಿಸುತ್ತಿರುವ ಶಾಲೆಯ ವ್ಯಾಪ್ತಿಯ ಬಿ.ಇ.ಓ ಕಛೇರಿಯಿಂದ ಪಡೆದ ಸೇವಾ ದೃಢೀಕರಣ ಪತ್ರ ಮತ್ತು ವೇತನ ಪ್ರಮಾಣ ಪತ್ರ (ಹೆಚ್.ಆರ್.ಎಂ.ಎಸ್ ಪ್ರತಿ)
2) ಬಿ.ಇ.ಓ ರವರಿಂದ ಅನುಮೋದಿತ ವರ್ಗಾವಣಾ ಅರ್ಜಿಯ ದೃಢೀಕೃತ ಪ್ರತಿ.
3) ನೇಮಕಾತಿಯ / ಬಡ್ತಿಯ ಆದೇಶ ಪ್ರತಿ.
4) ಶಿಕ್ಷಕರು ಈ ಹಿಂದೆ ಯಾವುದೇ ವಿಧವಾದ ವರ್ಗಾವಣೆ ಪಡೆದಿದ್ದಲ್ಲಿ ಆ ವರ್ಗಾವಣೆಯ ಆದೇಶದ ದೃಢೀಕೃತ ಪ್ರತಿ.
5) ವರ್ಗಾವಣೆ ಕಾಯ್ದೆ ಜಾರಿಗೆ ಬಂದ ನಂತರ ಇದೇ ಮೊದಲ ಬಾರಿಗೆ ಪರಸ್ಪರ ವರ್ಗಾವಣೆ ಪಡೆಯುತ್ತಿರುವ ಬಗ್ಗೆ ಮುಚ್ಚಳಿಕೆ ಪತ್ರ.
6) ವರ್ಗಾವಣಾ ಕಾಯ್ದೆ ಜಾರಿಗೆ ಬಂದ ನಂತರ ಇದೇ ಮೊದಲ ಬಾರಿಗೆ ಘಟಕದ ಹೊರಗಿನ ವರ್ಗಾವಣೆಯಾಗಿರುತ್ತದೆ ಎಂಬುದರ ಬಗ್ಗೆ ದೃಢೀಕರಣ/ ಮುಚ್ಚಳಿಕೆ ಪತ್ರ.
7) ಶಿಕ್ಷಕರುಗಳ ಪಾಸ್‌ಪೋರ್ಟ್ ಅಳತೆಯ ಭಾವ ಚಿತ್ರಗಳು

ಪರಸ್ಪರ ವರ್ಗಾವಣೆಯ ಬಗ್ಗೆ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುವ ಅಂತಿಮ ಆದ್ಯತಾ ಪಟ್ಟಿಯನ್ನು ನೋಡಿಕೊಂಡು ಅದರಲ್ಲಿನ ಆದ್ಯತಾ ಕ್ರಮ ಸಂಖ್ಯೆಯನ್ನು ಗಮನಿಸಿ ಕೌನ್ಸಿಲಿಂಗ್‌ಗೆ ಹಾಜರಾಗುವುದು.

(ಕೆ. ಆನಂದ)
ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
ಹಾಗೂ ರಾಜ್ಯ ಮಟ್ಟದ ವರ್ಗಾವಣಾ ಪ್ರಾಧಿಕಾರಿಗಳು.